



ಕುಡುಕರಿಬ್ಬರು ರಸ್ತೆಯಲ್ಲಿ ಪರಸ್ಪರ ಮಾತಾಡುತ್ತಾ ಸಾಗುತ್ತಿದ್ದರು.

**ಕುಡುಕ 1:** ನಾನು ಈ ರಾಜ್ಯದ ಮುಖ್ಯಮಂತ್ರಿಯಾಗುತ್ತೇನೆ.

**ಕುಡುಕ 2:** ಹ....ಹ್ಹ....ಹ್ಹಾ....

**ಕುಡುಕ 1:** ಯಾಕಲೇ ಮಂಗ್ಯಾ ನಗ್ತೀಯಾ...?

**ಕುಡುಕ 2:** ಈ ಮಂಗ್ಯಾ ರಾಜೀನಾಮೆ ಕೊಟ್ರೆ ತಾನೇ ನೀನು ಮುಖ್ಯಮಂತ್ರಿಯಾಗೋದು?

★★★

ವಕೀಲೆ ಪತ್ನಿ: ಸ್ವಲ್ಪ ಸಮಜಾಯಿಕೆಯಿಂದ ವಿಚ್ಛೇದನಗಳನ್ನು ತಪ್ಪಿಸಬಹುದೆಂದು ನನ್ನ ವಾದ, ನಿಮಗೆ ಹಾಗನಿಸುತ್ತಿಲ್ಲವೆ?

ನ್ಯಾಯಾಧೀಶ ಪತಿ: ಸ್ವಲ್ಪ ಸಮಜಾಯಿಕೆಯಿಂದ ಮದುವೆಗಳನ್ನೇ ತಪ್ಪಿಸಬಹುದೆಂದು ನನ್ನ ತೀರ್ಮಾನ, ನೀನೇನಂತಿ?

★★★

ಸ್ತ್ರೀಯರು ಇತರ ಸ್ತ್ರೀಯರನ್ನು ದೂಷಿಸಿದಷ್ಟೂ ದಣಿಯುವುದಿಲ್ಲ, ಪುರುಷರು ಇತರ ಸ್ತ್ರೀಯರನ್ನು ಹೊಗಳಿದಷ್ಟೂ ದಣಿಯುವುದಿಲ್ಲ...ಎಂಥಾ ವಿಪರ್ಯಾಸ!

★★★

ನೀತಾ ಮತ್ತು ಗೀತಾ ತುಂಬಾ ವರ್ಷಗಳ ಬಳಿಕ ಭೇಟಿಯಾದರು.

ಗೀತಾ: ಅಲ್ಲ ಕಣೇ, ನಿನಗೆ ವಿವಾಹ ವಿಚ್ಛೇದನವಾದಾಗ ಒಂದೇ ಮಗುವಿತ್ತು, ಆದರೆ ಈಗ ಮೂರು ಮಕ್ಕಳು ಹೇಗಾದರು?

ನೀತಾ: ಛಿ, ಹೋಗೇ.... ನಂಗೆ ನಾಚಿಕೆಯಾಗುತ್ತೆ! ಅವರು ನಡುನಡುವೆ ಕ್ಷಮೆ ಕೇಳಲು ಬರುತ್ತಿದ್ದರು ಕಣೆ..!'

★★★

ನಿವೃತ್ತ ಅಧಿಕಾರಿಯೋರ್ವರ ತೋಟದಲ್ಲಿ ವಿಶಾಲವಾದ ಕೊಳವೊಂದಿತ್ತು. ಒಮ್ಮೆ ಅಲ್ಲಿದ್ದ ವೃಕ್ಷಗಳಿಂದ ಹಣ್ಣುಗಳನ್ನಾಯಲು ಅತ್ತ ತೆರಳಿದಾಗ ಕೆಲವು ಯುವತಿಯರು ಸ್ನಾನ ಮಾಡುತ್ತಿರುವುದನ್ನು ಅವರು ಕಂಡರು. ಆಗ ಯುವತಿಯರು ಆಳ ನೀರಿಗೆ ಹೋಗಿ, 'ನೀವಿಲ್ಲಿಂದ ಹೋಗೋವರೆಗೆ ನಾವು ಹೊರಗೆ ಬರುವುದಿಲ್ಲ' ಎನ್ನುತ್ತಾ ನಾಚಿ ಬಚ್ಚಿಟ್ಟುಕೊಂಡರು.

'ತಪ್ಪು ತಿಳಿಯಬೇಡಿ, ನಾನೇನೂ ನೀವು ಸ್ನಾನ ಮಾಡುತ್ತಿರುವುದನ್ನು ಅಥವಾ ಹೊರಬರುವುದನ್ನು ವೀಕ್ಷಿಸಲು ಬಂದಿಲ್ಲ: ಕೊಳದಲ್ಲಿರುವ ಮೊಸಳೆಗಳಿಗೆ ಆಹಾರ ಹಾಕಲು ಬಂದೆ ಅಷ್ಟೇ....' ಎಂದನ್ನುವಷ್ಟರಲ್ಲಿ ಲಲನೆಯರೆಲ್ಲಾ ಒಂದೇ ನೆಗೆತಕ್ಕೆ ಹಾರಿ ಹೊರ ಬಂದರು.

ಯಾವುದೇ ವಯೋಮಾನ ಅಥವಾ ಹುದ್ದೆಯಲ್ಲಿದ್ದರೂ ಪುರುಷರು ಪುರುಷರೇ....!

**(ಸಂಗ್ರಹ) ರಮಣ್ ಶೆಟ್ಟಿ ರಂಜಾಳ್, ಮುಂಬೈ**

ಅಂಗಡಿಯಾತ: ನಿನಗೇನು ಬೇಕು?

ಗುಂಡ: ನನಗೆ ಆತ್ಮವಿಶ್ವಾಸ ಬೇಕು. ಜಗತ್ತನ್ನೆದುರಿಸುವ ಧೈರ್ಯ ಬೇಕು. ಬಾಳಲ್ಲಿ ಮುನ್ನುಗ್ಗುವ ಯುಕ್ತಿ/ ಉತ್ಸಾಹ ಬೇಕು ಮತ್ತು ಈ ಕ್ರೂರಿ ಜಗತ್ತು ಎಳೆಯುವ ಗಾಯದ ಬರೆಗಳನ್ನು ಸಹಿಸುವ ಶಕ್ತಿ ಬೇಕು.

ಅಂಗಡಿಯಾತ: ಲೋ ಚೋಟು, ಇವನಿಂದ ಇನ್ನೂರು ರೂಪಾಯಿ ತೆಗೆದುಕೊಂಡು ಒಂದು ಕ್ವಾರ್ಟರ್ ಮತ್ತು ಒಂದು ಪೊಟ್ಟಣ ಹುರಿಗಡಲೆ ಬೀಜ ಕೊಟ್ಟು ಕಳುಹಿಸು!

★★★

ಯಂಕ: ಆಧಾರ್ ಲಿಂಕ್ ಮಾಡಲು ನಿನ್ನೆ ಗುಂಡ ಬ್ಯಾಂಕಿಗೆ ಹೋಗಿದ್ನಂತೆ. ಪೊಲೀಸರು ಒಳಗೆ ಹಾಕಿದ್ದಾರಂತೆ.

ಮಂಕ: ನಿನ್ನೆ ಸಂಜೆವರ್ಗೂ ನಮ್ಮ ಜೊತೇನೇ ಇದ್ನಲ್ಲ. ಅದ್ಯಾವ್ಯಾಗ ಬ್ಯಾಂಕಿಗೆ ಹೋಗಿದ್ದ?

ಯಂಕ: ನಿನ್ನೆ ಮಧ್ಯ ರಾತ್ರೀಲಿ.

★★★

ಗುಂಡ: ಒಂದು ದಿನ ಮಾತ್ರ 'ವುಮೆನ್ಸ್ ಡೇ' ಆಚರಿಸೋದು, ಮಹಿಳೆಯರಿಗೆ ಅವಮಾನ ಮಾಡಿದಂತೆ ಅಲ್ವ?

ಗೆಳೆಯ: ಅದ್ಹೆಂಗೆ?

ಗುಂಡ: ಪ್ರತಿ ದಿನಾನೂ ಅವರ್ದೇ ಅಲ್ವ?

**(ಸಂಗ್ರಹ) ಹಾಡ್ಯ ಬ. ಜಯಾನಂದ ಮೈಸೂರು**






ಶ್ರೀ ಪಂಚಮುಖಿ ಜ್ಯೋತಿಷ್ಯಂ

ॐ ✝ ☪ INDIA'S MOST POPULAR ASTROLOGER ॐ ✝ ☪

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450